# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 20 ಟಿಇಸಿ 99

ಕರ್ನಾಟಕ ಸರ್ಕಾರದ ಸಚಿವಾಲಯ,
ಸಚಿವಾಲಯ–2
ಬೆಂಗಳೂರು, ದಿನಾಂಕ: 20-3-99.

## ಸುತ್ತೋಲೆ

ವಿಷಯ: ಶಿಕ್ಷಣ ಸಚಿವಾಲಯದಿಂದ ಹೊರಡಿಸಲಾದ ನೇಮಕಾತಿ ಆದೇಶಗಳು, ಸ್ಥಳ ನಿಯುಕ್ತಿ ಆದೇಶಗಳು, ಅಧಿಸೂಚನೆಗಳು, ಸುತ್ತೋಲೆಗಳು ಸೂಚನೆಗಳನ್ನು ಕೂಡಲೇ ಜಾರಿಗೆ ಬರುವಂತೆ ಅನುಷ್ಠಾನಗೊಳಿಸುವ ಬಗ್ಗೆ ಸೂಚನೆಗಳು

::::

ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿನ ಉಪನ್ಯಾಸಕರು, ವಿಭಾಗಾಧಿಕಾರಿ ಮತ್ತು ಪ್ರಾಂಶುಪಾಲರುಗಳು ಪತ್ರಾಂಕಿತ ಅಧಿಕಾರಿಗಳಾಗಿದ್ದು, ಈ ಸಂಬಂಧವಾಗಿ ಶಿಕ್ಷಣ ಸಚಿವಾಲಯವು ಕಾಲಕಾಲಕ್ಕೆ ಮೇಲ್ಕಂಡ ಅಧಿಕಾರಿಗಳಿಗೆ ಸಂಬಂಧಿಸಿದ ನೇಮಕಾತಿ ಆದೇಶಗಳು, ಸ್ಥಳ ನಿಯುಕ್ತಿ ಆದೇಶಗಳು, ಅಧಿಸೂಚನೆಗಳು, ಸುತ್ತೋಲೆಗಳು ಇವುಗಳನ್ನು ಹೊರಡಿಸುತ್ತಿದ್ದು ಇವುಗಳನ್ನು ತಾಂತ್ರಿಕ ಶಿಕ್ಷಣ ನಿರ್ದೇಶಕರನ್ನು ಒಳಗೊಂಡಂತೆ ಪ್ರಾಂಶುಪಾಲರಿಗೂ ಸಹ ನೇರವಾಗಿ ಕಳುಹಿಸಲಾಗುತ್ತಿದೆ. ಸರ್ಕಾರದಿಂದ ಹೊರಡಿಸಿದ ಇಂತಹ ಆದೇಶಗಳನ್ನು ಕೆಲವು ಪ್ರಾಂಶುಪಾಲರು ಮಾನ್ಯ ಮಾಡುತ್ತಿಲ್ಲವೆಂದು ಸರ್ಕಾರದಲ್ಲಿ ದೂರು ಸ್ವೀಕೃತವಾಗಿವೆ. ತಾಂತ್ರಿಕ ಶಿಕ್ಷಣ ನಿರ್ದೇಶಕರಿಂದ "ಚಲನಾ ಆದೇಶವು" (MOVEMENT ORDER) ಬಂದಿಲ್ಲವೆಂಬ ಏಕಮಾತ್ರ ಕಾರಣಕ್ಕಾಗಿ ಸರ್ಕಾರದ ಆದೇಶವನ್ನು ಅನುಷ್ಠಾನಗೊಳಿಸದಿರುವ ಪ್ರಸಂಗಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು. ಸರ್ಕಾರದಿಂದ ಹೊರಡಿಸಿದ ಆದೇಶಗಳನ್ನು ತಾಂತ್ರಿಕ ಶಿಕ್ಷಣ ನಿರ್ದೇಶಕರ "ಚಲನಾ ಆದೇಶ"ವನ್ನು ಕಾಯುವ ಅಗತ್ಯವಿಲ್ಲ. ಇದು ಅನೇಕ ಸಂದರ್ಭಗಳಲ್ಲಿ ಅನಗತ್ಯ ಕಡ್ಡಾಯ ನಿರೀಕ್ಷಣಾ ಅವಧಿಗೆ ಎಡೆ ಮಾಡಿಕೊಡುತ್ತದೆ. ಈ ರೀತಿ ಅಧಿಕಾರಿಗಳು ಉಪನ್ಯಾಸಕರುಗಳು ಅನಗತ್ಯವಾಗಿ ಕಡ್ಡಾಯ ನಿರೀಕ್ಷಣಾ ಅವಧಿಯಲ್ಲಿ ಉಳಿಯಬೇಕಾಗುವುದರಿಂದ ಇದರಿಂದ ಸರ್ಕಾರಕ್ಕೆ ಅನಾವಶ್ಯಕ ಆರ್ಥಿಕ ಹೊರೆ ಉಂಟಾಗುತ್ತದೆ.

ಆದ್ದರಿಂದ ಮೇಲೆ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರದಿಂದ ಹೊರಡಿಸಲಾಗುವ ಎಲ್ಲಾ ನೇಮಕಾತಿ ಆದೇಶಗಳು : ಸ್ಥಳ ನಿಯುಕ್ತಿ ಆದೇಶಗಳು, ಅಧಿಸೂಚನೆಗಳು : ಆದೇಶಗಳು ಇತ್ಯಾದಿಗಳನ್ನು ಸಂಬಂಧಪಟ್ಟ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರು : ಹಿರಿಯ ಪ್ರಾಂಶುಪಾಲರುಗಳು, ಸ್ವೀಕೃತವಾದ ಕೂಡಲೇ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ. ಈ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ ಈ ಮೂಲಕ ನಿರ್ದೇಶಿಸಲಾಗಿದೆ.

(ಮುಹಮ್ಮದ್ ಶರೀಫ್ ಉದ್ದೀನ್) 20/3/99
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

( ):

1) ತಾಂತ್ರಿಕ ಶಿಕ್ಷಣ ನಿರ್ದೇಶಕರು, ಬೆಂಗಳೂರು.
2) ಜಂಟಿ ನಿರ್ದೇಶಕರು : ಆಡಳಿತಾಧಿಕಾರಿ:ಮುಖ್ಯ ಆಡಳಿತಾಧಿಕಾರಿ:ಉಪ ನಿರ್ದೇಶಕರು: ಸಹಾಯಕ ನಿರ್ದೇಶಕರು: ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3) ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ(ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
4) ವಾರದ ಗೆಜೆಟ್.
5) ಶಾಖಾ ರಕ್ಷಾ ಕಡತ.